

ಅಪಾಯದ ಕುರಿತೂ ಗಮನ ಸೆಳೆಯುತ್ತಾರೆ. 'ನೃತ್ಯ, ಸಂಗೀತ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಂಡ ಮಕ್ಕಳು ಅದನ್ನು ಎಂಜಾಯ್ ಮಾಡುತ್ತಿದ್ದಾರೆ ಎಂದರೆ ಮಧ್ಯದಲ್ಲಿ ಬಿಡುವುದೇ ಇಲ್ಲ. ಆದರೆ ತರಗತಿಗೆ ಸೇರಿಕೊಳ್ಳುವ ಮಕ್ಕಳಲ್ಲಿ ಅರ್ಧಕ್ಕೆ ಬಿಡುವವರೇ ಹೆಚ್ಚು. ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳನ್ನು ಹೇಳಿಕೊಡಲೇಬಾರದು ಎಂಬುದು ನನ್ನ ಅಭಿಪ್ರಾಯವಲ್ಲ. ಅವರನ್ನು ವಿವಿಧ ತರಗತಿಗೆ ಸೇರಿಸಿ ಕೆಲವೇ ದಿನಗಳಲ್ಲಿ ಅವರಿಗೆ ಆಸಕ್ತಿ ಇದೆಯೋ ಇಲ್ಲವೋ, ಎಂಜಾಯ್ ಮಾಡುತ್ತಾರೋ ಇಲ್ಲವೋ ಎಂಬುದು ಸ್ಪಷ್ಟವಾಗಿಬಿಡುತ್ತದೆ. ಖುಷಿಖುಷಿಯಾಗಿ ಮಾಡುತ್ತಾರೆ ಎಂದರೆ ಮುಂದುವರಿಸಿ. ಆದರೆ ಇಷ್ಟವಿಲ್ಲದಿದ್ದರೂ ಒತ್ತಾಯಪೂರ್ವಕವಾಗಿ ಕಳಿಸುವುದು ಮಕ್ಕಳಲ್ಲಿ ಒತ್ತಡವನ್ನುಂಟು ಮಾಡುತ್ತದೆ.

ಪೋಷಕರು ಅದೆಷ್ಟೋ ಬಾರಿ ತಮ್ಮ ಆಶಯಗಳನ್ನು ಮಕ್ಕಳ ಮೇಲೆ ಹೇರುತ್ತಿರುತ್ತಾರೆ. ನಮಗೆ ಮಾಡಲಾಗದ ಕೆಲಸಗಳನ್ನೆಲ್ಲ ಮಕ್ಕಳಿಂದ ನೆರವೇರಿಸಿಕೊಂಡು ಖುಷಿಪಡುವ ತವಕ ಅವರಿಗೆ. ಇನ್ನೂ ವಿಚಿತ್ರ ಎಂದರೆ ತರಗತಿಗೆ ಸೇರಿಸುವಾಗಲೇ ಯಾವಾಗ ಪರ್ಫಾರ್ಮ್ ಮಾಡಬಹುದು ಎಂದು ಕೇಳುತ್ತಾರೆ. ರಿಯಾಲಿಟಿ ಶೋಗಳಂಥ ಸ್ಪರ್ಧಾತ್ಮಕ ಮನೋಭಾವಗಳನ್ನು ಮಕ್ಕಳ ಮನಸ್ಸಿನಲ್ಲಿ ಹುಟ್ಟುಹಾಕಿ ಅಮಾನುಷವಾದ ಕ್ರೌರ್ಯವನ್ನು ಪೋಷಕರು ತೋರುತ್ತಿದ್ದಾರೆ. ಅವಸರ ಯಾವತ್ತಿದ್ದರೂ ಅಪಾಯವೇ' ಎಂಬುದು ಅವರ ನುಡಿ.



## ನಿರ್ಣಾಯಕರಲ್ಲ; ದಿಕ್ಸೂಚಿಗಳು

ಮಕ್ಕಳನ್ನು ಬೆಳೆಸುವಲ್ಲಿ ಹೀಗೆ ಹೀಗೆ ಮಾಡಬಾರದು ಎಂದು ಹೇಳುವ ಸಲಹೆಗಳು ಬೇಕಾದಷ್ಟು ಸಿಗುತ್ತವೆ. ಆದರೆ ಹೇಗೆ ಬೆಳೆಸಬೇಕು ಎಂಬ ಕುರಿತು ಸರಿಯಾದ ಸಲಹೆಗಳು ಸಿಗುವುದು ಕಮ್ಮಿಯೇ.

ಶ್ರೀಧರಮೂರ್ತಿ ಅವರೂ ಮಕ್ಕಳ ಬೆಳವಣಿಗೆಗೆ ಪೂರಕವಾಗಿ ಪೋಷಕರು ಹೇಗೆ ಬೆಂಬಲವಾಗಬೇಕು ಎಂಬ ಕುರಿತು ಮುಖ್ಯವಾದ ಸಲಹೆಗಳನ್ನು ನೀಡುತ್ತಾರೆ. ಅವರ ಪ್ರಕಾರ ಪೋಷಕರು ದಿಕ್ಸೂಚಿಗಳೇ ಹೊರತು ಮಕ್ಕಳ ಬದುಕಿನ ದಿಶೆಯನ್ನು ನಿರ್ಧರಿಸುವ ನಿರ್ಣಾಯಕರಲ್ಲ.

'ತಂದೆ ತಾಯಿಯಾದವರು ಮಕ್ಕಳಿಗೆ ಇಂತಿಂತದ್ದು ಒಳ್ಳೆಯ ಸಂಗತಿಗಳಿವೆ ಎಂದು ತೋರಿಸಿಕೊಡಬೇಕು. ಅದರಲ್ಲಿ ತನಗೆ ಯಾವುದು ಬೇಕು ಎಂದು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮಕ್ಕಳಿಗೇ ನೀಡಬೇಕು. ಇನ್ನೂ ಮುಖ್ಯವಾಗಿ ಮಕ್ಕಳನ್ನು ಸ್ವಾವಲಂಬಿಯನ್ನಾಗಿ ಬೆಳೆಸಬೇಕು. ಸ್ಪರ್ಧೆ ಇತರರೊಂದಿಗೆ ಅಲ್ಲ, ತನ್ನ ಅಭಿವೃದ್ಧಿಗೆ ತನ್ನೊಂದಿಗೇ ಸ್ಪರ್ಧೆ ಎನ್ನುವುದನ್ನು ಹೇಳಿಕೊಡಬೇಕು. ಅದನ್ನು ಬಿಟ್ಟು ತಂದೆತಾಯಿಗಳು ತಮಗಿರುವ ಪರಾಜಯದ ಭಯವನ್ನು ಮಕ್ಕಳಿಗೆ ಪಾಸ್ ಮಾಡುತ್ತಿದ್ದಾರೆ. ಮತ್ತೊಬ್ಬರಿಗಿಂತ ತನ್ನ ಮಗ/ಮಗಳು ಉತ್ತಮರಾಗಬೇಕು ಎನ್ನುವ ಧಾವಂತದಲ್ಲಿ ಮಕ್ಕಳಿಗೆ ಎಲ್ಲವನ್ನು ಚೌಕಟ್ಟಿಗೆ ಇಳಿಸಿಕೊಡುತ್ತಿದ್ದಾರೆ. ಇದು ಮಕ್ಕಳನ್ನು ಫೆವಿಕಾಲ್‌ನಲ್ಲಿ ಅಂಟಿದ ನೊಣದಂತೆ ಮಾಡುತ್ತದೆಯೇ ಹೊರತು ಸ್ವಚಿಂತನೆ ಬೆಳೆಸಿಕೊಳ್ಳುವುದಕ್ಕೆ ನೆರವಾಗುವುದಿಲ್ಲ. ಬದುಕಿನಲ್ಲಿ, ಮಾರ್ಕ್ಸ್, ಹಣ, ಪ್ರಶಸ್ತಿಗಳಿಗಿಂತ ನೆಮ್ಮದಿ ಹೆಚ್ಚು ಮುಖ್ಯ. ಅದನ್ನು ಅರಸಿಕೊಳ್ಳುವ ದಾರಿಯನ್ನು ಹಿರಿಯರು ತೋರಬೇಕು' ಎನ್ನುತ್ತಾರೆ ಅವರು.

'ಮಕ್ಕಳ ಬಗ್ಗೆ ನೈಜ ಅಕ್ಕರೆ ಇರಬೇಕು. ಇತರರಿಗಿಂತ ನನ್ನ ಮಗು ಬುದ್ಧಿವಂತ ಎನ್ನುವ ನಂಬಿಕೆ ಇರಬೇಕು. ಆಗ ಇತರರೊಂದಿಗೆ ಹೋಲಿಕೆ ಮಾಡುವುದನ್ನು ಬಿಟ್ಟು ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವ ಕೆಲಸವಾಗುತ್ತದೆ' ಎನ್ನುವ ಶ್ರೀಧರಮೂರ್ತಿ ಅವರ ಮಾತಿನಲ್ಲಿ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ಮಕ್ಕಳು ಮುಕ್ಕಾಗದೆಯೇ ತಮ್ಮ ಅಸ್ಮಿತೆಯನ್ನು ಬೆಳೆಸಿಕೊಳ್ಳುವ ಹಾಗೆ ಅಣಿಗೊಳಿಸುವ ದಾರಿಯ ಕೀಲಿಕೈ ಇದ್ದಂತಿದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in